<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 15317-2016

ಸಿಡಬ್ಲೂ - 53ಪಿಡಬ್ಲೂ-16

| | | |
|---|---|---|
| ಸಾಕ್ಷಿದಾರರ ಹೆಸರು | : | ಸನಾವುಲ್ಲಾ |
| ತಂದೆಯ ಹೆಸರು | : | ಖರೀಂಸಾಬ್ |
| ವಯಸ್ಸು | : | 54 ವರ್ಷ |
| ಕೆಲಸ | : | ಖಾಸಗಿ ಕೆಲಸ |
| ವಾಸ | : | ಚಿಕ್ಕಬಣಾವಾರ, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

2016 ನೇ ಸಾಲಿನಲ್ಲಿ ಉಂಟಾದ ಅಪಘಾತದಿಂದ ನನ್ನ ಹೆಂಡತಿ ಶಬಾನಾ ತಾಜ್ ರವರು ಮೃತಪಟ್ಟಿರುತ್ತಾರೆ. ಘಟನಾ ಸಮಯದಲ್ಲಿ ನಾನು ಮತ್ತು ನನ್ನ ಹೆಂಡತಿ ವಾಯುವಿಹಾರ ಮಾಡುತ್ತಿದ್ದು, ನಮ್ಮ ಎದುರಿದಿಂದ ಬಂದ ಒಂದು ಕಾರು ಅಪಘಾತ ಪಡಿಸಿರುತ್ತದೆ. ಕಾರಿನ ಸಂಖ್ಯೆ ನನಗೆ ಗೊತ್ತಿಲ್ಲ. ಅಪಘಾತದ ನಂತರ ನಾನು ಸಪ್ತಗಿರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗಿರುತ್ತೇನೆ. ನನ್ನ ಹೆಂಡತಿ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ಕತ್ತಲಾಗಿದ್ದ ಕಾರಣ ಕಾರಿನ ಚಾಲಕನನ್ನು ನೋಡಲು ಸಾಧ್ಯವಾಗಿರುವುದಿಲ್ಲ. ಈ ಪ್ರಕರಣದ ಯಾವ ವಿಚಾರವಾಗಿ ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ . ನಾನು ಪ್ರಸುತ್ತ ಆರೋಪಿಗಳ ವಿರುದ್ಧ ಯಾವುದೇ ದೂರನ್ನು ದಾಖಲಿಸಿರುವುದಿಲ್ಲ. ಆದರೆ ಅಪಘಾತದ ವಿಚಾರವಾಗಿ ನಾನು ಪ್ರಕರಣ ದಾಖಲಿಸಿರುತ್ತೇನೆ. ಸದರಿ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಬೇಟಿ ನೀಡಿ ನನ್ನ ಹೇಳಿಕೆಯನ್ನು ಸಹ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ, ಹಿ.ಸ.ಸಾ.ಅ. ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಹಿ.ಸ.ಸಾ.ಅ. ರವರಿಂದಃ</u>

ನನ್ನ ಹೆಂಡತಿಗೆ ಮತ್ತು ನನಗೆ ಅಪಘಾತವಾದ ಕಾರಣ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಗಳು ಸದರಿ ಕಾರಿನ ಚಾಲಕನಿಗೆ ಹಲ್ಲೆ ಮಾಡಿ ಅಪಘಾತ

ಪಡಿಸಿದ ಕಾರನ್ನು ಬೆಂಕಿ ಹಚ್ಚಿ ಸುಟ್ಟು ಹಾಕಿದ್ದ ಕಾರಣ ಈ ಕೇಸು ದಾಖಲಿಸಿದ್ದು ಸದರಿ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ ಇಲ್ಲಾ

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ